## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY, RESEARCH AND REFERENCE BRANCH

### ಪತ್ರಿಕಾ ತುಣುಕುಗಳು
### PAPER CLIPPINGS

(21)

ಇಲಾಖೆ / ವಿಷಯ : DEPARTMENT / SUBJECT: ಕಂದಾಯ ಇಲಾಖೆ / ಭೂ ಸುಧಾರಣಾ ಕಾಯ್ದೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE : 23/12/20

---

### ಭೂ ಸುಧಾರಣಾ ತಿದ್ದುಪಡಿ ಕಾಯಿದೆ । ಜ.6ಕ್ಕೆ ಮರು ವಿಚಾರಣೆ

# ಆಕ್ಷೇಪಣೆ ಸಲ್ಲಿಸಲು ಜ.5ರ ಅಂತಿಮ ಗಡುವು

■ **ವಿಕ ಸುದ್ದಿಲೋಕ** ಬೆಂಗಳೂರು 23/12/20

ಕರ್ನಾಟಕ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತಂದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಲು ಹೈಕೋರ್ಟ್, ಸರಕಾರಕ್ಕೆ ಜನವರಿ 5ರ ಅಂತಿಮ ಗಡುವು ನೀಡಿದೆ.

ಅಲ್ಲದೆ, ಈ ಹಿಂದೆ ಕಾಯಿದೆ ಆಧರಿಸಿ ಕೈಗೊಂಡಿರುವ ಸರಕಾರದ ಎಲ್ಲ ಕ್ರಮಗಳು ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಡುತ್ತವೆ ಎಂಬ ಮಧ್ಯಂತರ ಆದೇಶವನ್ನು ಮುಂದುವರಿಸಿತು. ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಹಾಗೂ ಇನ್ನೂ ಹಲವರು ಸಲ್ಲಿಸಿರುವ ಪಿಐಎಲ್ ಸಿಜೆ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠದ ಮುಂದೆ ಮಂಗಳವಾರ ವಿಚಾರಣೆಗೆ ಬಂದಿತ್ತು.

ಆಗ ಸರಕಾರಿ ವಕೀಲರು ''ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶವನ್ನು



ಕೋರಿದರು. ಅಲ್ಲದೆ, ಕಾಯಿದೆಗೂ ಮುನ್ನ ಎರಡು ಬಾರಿ ಸುಗ್ರೀವಾಜ್ಞೆ ಜಾರಿಗೊಳಿಸಲಾಗಿತ್ತು. ನಂತರ ಕಾಯಿದೆಯನ್ನು ಎರಡೂ ಸದನಗಳು ಅನುಮೋದಿಸಿವೆ,'' ಎಂದರು. ಅದಕ್ಕೆ ಅರ್ಜಿದಾರರ ಪರ ವಕೀಲರೊಬ್ಬರು, ''ಇನ್ನೂ ರಾಜ್ಯಪಾಲರು ಕಾಯಿದೆಗೆ ಅನುಮೋದನೆ ನೀಡಿಲ್ಲ'' ಎಂದರು.

ಇತರ ಅರ್ಜಿದಾರರು, ''ಸರಕಾರ ಈ ವಿಚಾರದಲ್ಲಿ ಆಕ್ಷೇಪಣೆ ಸಲ್ಲಿಸಲು ತುಂಬಾ ವಿಳಂಬ ಮಾಡುತ್ತಿದೆ. ಹಾಗಾಗಿ, ಮತ್ತೆ ಕಾಲಾವಕಾಶ ನೀಡಬಾರದು,'' ಎಂದು ಆಕ್ಷೇಪವೆತ್ತಿದರು.

ಆಗ ನ್ಯಾಯಪೀಠ, ''ಅರ್ಜಿಯಲ್ಲಿ ಗಂಭೀರವಾದ ವಿಚಾರ ಪ್ರಸ್ತಾಪಿಸಲಾಗಿದೆ. ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಲಾಗಿದೆ, ಹಾಗಾಗಿ, ಸರಕಾರಕ್ಕೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕಾಗುತ್ತದೆ. ಅವಕಾಶ ನೀಡದೆ ಏಕಾಏಕಿ ಮಧ್ಯಂತರ ಆದೇಶದ ಬಗ್ಗೆ ವಿಚಾರಣೆ ನಡೆಸಲು ಸಾಧ್ಯವಿಲ್ಲ,'' ಎಂದು ಹೇಳಿತು. ಕೊನೆಗೆ ಬಹುತೇಕ ಎಲ್ಲ ಅರ್ಜಿದಾರರ ಪರ ವಕೀಲರು, ಸರಕಾರಕ್ಕೆ ಆಕ್ಷೇಪಣೆ ಕಾಲಾವಕಾಶ ನೀಡಲು ಒಪ್ಪಿದರು.

ಜ.5ರೊಳಗೆ ಸರಕಾರ ಆಕ್ಷೇಪಣೆ ಸಲ್ಲಿಸಬೇಕು, ಮತ್ತೆ ಕಾಲಾವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ನ್ಯಾಯಾಲಯ, ವಿಚಾರಣೆಯನ್ನು ಜ.6ಕ್ಕೆ ಮುಂದೂಡಿತು.